ಆರ್‌ಡಬ್ಲ್ಯೂ 1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ದಿಃ 18-06-2015

ಪಾಟೀ ಸವಾಲು : ಅರ್ಜಿದಾರರ ಪರವಾಗಿ ಶ್ರೀ ಎಮ್ ಕೆ ವಿ ಕೆ ವಕೀಲರಿಂದಃ

ನ್ಯಾಯಾಲಯದ ಆಯುಕ್ತರು ಕೊಟ್ಟ ವರದಿಯಲ್ಲಿ ತೋರಿಸಿದಂತೆ ಆಸ್ತಿಯನ್ನು ವಿಭಾಗ ಮಾಡಿದ್ದಲ್ಲಿ ಪ್ರತಿಯೊಂದು ಆಸ್ತಿಯವರಿಗೂ ತಮ್ಮ ತಮ್ಮ ಆಸ್ತಿಗೆ ಹೋಗಲು ಸೂಕ್ತ ದಾರಿಯನ್ನು ಬಿಡುವ ಅವಶ್ಯಕತೆ ಇರುತ್ತದೆ. ನಕ್ಷೆಯಲ್ಲಿ ಮೇಲೆ ಹೇಳಿದಂತೆ ರಸ್ತೆಗೆ ಬೇಕಾದ ಸ್ಥಳವನ್ನು ಕಾಯ್ದಿರಿಸಿ ಅದನ್ನು ನಮೂದಿಸುವ ಅವಶ್ಯಕತೆ ಇರುತ್ತದೆಂದು ನನ್ನ ಪ್ರಾರ್ಥನೆಯಾಗಿರುತ್ತದೆ. ನಮ್ಮ ಆಸ್ತಿಯಲ್ಲಿ 2 ಮನೆ ಇದೆ. ಒಂದು ಮನೆಯಲ್ಲಿ ನನ್ನ ಅಣ್ಣ ರಾಧಾಕೃಷ್ಣ ಇದ್ದಾನೆ. ಇನ್ನೊಂದು ಮನೆಯಲ್ಲಿ ರಾಜೇಶ್ ಮತ್ತು ನನ್ನ ತಾಯಿ ಒಟ್ಟಿಗೆ ಇದ್ದು, ನಾನು ಪ್ರತ್ಯೇಕ ಇರುತ್ತೇನೆ. ಆ ಮನೆಗೆ 2 ವಿದ್ಯುಚ್ಛಕ್ತಿ ಮೀಟರ್ ಇದೆ. ನನ್ನ ಭಾಗದ ವಿದ್ಯುಚ್ಛಕ್ತಿ ಮೀಟರ್‌ನ ಬಿಲ್ಲು ನಾನು ಪಾವತಿಸುತ್ತೇನೆ. ಇನ್ನೊಂದು ವಿಭಾಗದ ವಿದ್ಯುಚ್ಛಕ್ತಿ ಮೀಟರ್ ತಾಯಿಯ ಹೆಸರಿನಲ್ಲಿದೆ. ಅದೇ ಮನೆಗೆ ಸಂಬಂಧಪಟ್ಟಂತೆ ನನಗೆ, ತಾಯಿಗೆ ಮತ್ತು ರಾಜೇಶ್‌ನಿಗೆ ಬೇರೆ ಬೇರೆ ರೇಷನ್ ಕಾರ್ಡ್ ಇರುತ್ತದೆ. ನಾವು ವಾಸವಾಗಿರುವ ಮನೆಗೆ ನಾನು ಇದ್ದಲ್ಲಿ ಮತ್ತು ರಾಜೇಶ್ ಮತ್ತು ನನ್ನ ತಾಯಿ ಇರುವಲ್ಲಿ ಮೂರು ಪ್ರತ್ಯೇಕ್ ಡೋರ್ ನಂಬರ್‌ಗಳನ್ನು ಪಂಚಾಯತಿ ನೀಡಿದ್ದು, ಅದಕ್ಕೆ ಪ್ರತ್ಯೇಕ ಕರ ಪಾವತಿಸಲಾಗುತ್ತದೆ ಎಂದರೆ ಸಾಕ್ಷಿಯು ಈ ಕೇಸು ಹಾಕಿದ ನಂತರ 2011 ನೇ ಇಸವಿಯಲ್ಲಿ ರಾಜೇಶ್ ತನ್ನ ಮನೆಗೂ ಡೋರ್ ನಂಬರ್ ಮಾಡಿಸಿದ್ದಾನೆ. ಆದರೆ ಒಂದೇ ಮನೆ ಇರುತ್ತದೆ. ರಾಜೇಶ್‌ನು ತನ್ನ ಭಾಗಕ್ಕೆ ಡೋರ್ ನಂಬರ್ ಮಾಡಿಸುವ ಮೊದಲು ಒಂದು ಭಾಗಕ್ಕೆ ತಾಯಿಯ ಹೆಸರಿನಲ್ಲಿ ಮತ್ತು ಇನ್ನೊಂದು ಭಾಗಕ್ಕೆ ನನ್ನ ಹೆಸರಿನಲ್ಲಿ 2 ಡೋರ್ ನಂಬರ್ ಇತ್ತು. ರಾಜೇಶ್‌ನು ಸುಮಾರು 7 ವರ್ಷದ ಹಿಂದೆ ಒಂದು ಮುಸ್ಲಿಂ ಹುಡುಗಿಯನ್ನು ಮದುವೆಯಾಗಿ ಮನೆಗೆ ಕರೆದುಕೊಂಡು ಬಂದಿರುತ್ತಾನೆ. ಆತನಿಗೆ 2 ಮಕ್ಕಳು ಇರುತ್ತಾರೆ. ಮೊದಲು ರಾಜೇಶ್, ಆತನ ಹೆಂಡತಿ ಮತ್ತು ನನ್ನ ತಾಯಿ ಒಳ್ಳೆಯ ಬಾಂಧವ್ಯದಲ್ಲಿದ್ದರು. ಇತ್ತೀಚಿಗೆ ನನ್ನ ತಾಯಿಗೆ ಮತ್ತು ರಾಜೇಶ್‌ನ ಹೆಂಡತಿಗೆ ಸರಿ ಬರುತ್ತಿಲ್ಲ ಎಂದರೆ ಸರಿ. ಈ ರೀತಿ ಸರಿ ಬರದ ಕಾರಣ ರಾಜೇಶ್ ತನ್ನ ಹೆಸರಿಗೆ ಮನೆಯ ಒಂದು ಅಂಶದಲ್ಲಿ ಬೇರೆ ಡೋರ್ ನಂಬರ್ ಮಾಡಿಸಿರುತ್ತಾನೆ. ಮನೆಯಲ್ಲಿ ಬೇರೆ ಬೇರೆ ಅಡುಗೆ ಮಾಡುತ್ತಾರೆಂದರೆ ಸಾಕ್ಷಿಯು ಕೆಲವೊಮ್ಮೆ ರಾಜೇಶ್‌ನ ಹೆಂಡತಿಯೊಂದಿಗೆ ಸರಿ ಇದ್ದು ಅವರೊಂದಿಗೆ 2 ತಿಂಗಳು ಇರುತ್ತಾರೆ. ನಂತರ ಜಗಳವಾಗಿ

ಬೇರೆ ಅಡುಗೆ ಮಾಡುತ್ತಾರೆ ಎಂದು ಹೇಳುತ್ತಾರೆ. ಜಗಳವನ್ನು ಯಾರು ಶುರು ಮಾಡುತ್ತಾರೆಂದು ನನಗೆ ಗೊತ್ತಿಲ್ಲ, ಆದರೆ ಗಲಾಟೆ ಕೇಳುತ್ತದೆ. ಸೀತಮ್ಮನಿಗೆ ಈ ಮನೆಯಲ್ಲದೇ ಬೇರೆ ಮನೆ ಇರುವುದಿಲ್ಲ.

ಈಗ ನಾವೆಲ್ಲಾ ವಾಸವಾಗಿರುವ ಮನೆ ಹಳೆ ಮನೆಯಾಗಿರುತ್ತದೆ. ರಾಧಾಕೃಷ್ಣ ಇರುವ ಮನೆ ತಂದೆ ಇರುವಾಗಲೇ ಆತನೇ ಕಟ್ಟಿದ ಮನೆ ಮತ್ತು ಆತನು ಅದರಲ್ಲಿ ವಾಸವಾಗಿದ್ದಾನೆ. ರಾಧಾಕೃಷ್ಣನ ಮನೆಯ ಸಮೀಪ ಆತನು ತೋಟವನ್ನು ಮಾಡಿದ್ದಾನೆ. ಅದು ಅಡಿಕೆ ತೋಟವಾಗಿರುತ್ತದೆ. ಅದೇ ಆಸ್ತಿಯಲ್ಲಿ ನಾನೂ ಕೂಡಾ ಒಂದು ಅಡಿಕೆ ತೋಟವನ್ನು ಮಾಡಿದ್ದೇನೆ. ನಾನು ಮಾಡಿದ ತೋಟ ನನ್ನ ಸ್ವಾಧೀನದಲ್ಲಿದೆ. ಅದರಲ್ಲಿ 700 ಅಡಿಕೆ ಮರಗಳು ಇವೆ. ನನ್ನ ತಾಯಿ ಸೀತಮ್ಮನ ಸ್ವಾಧೀನದಲ್ಲಿ 67 ತೆಂಗಿನ ಮರಗಳು ಹಾಗೂ ಸುಮಾರು 80 ರಷ್ಟು ಅಡಿಕೆ ಮರಗಳು ಇದ್ದು, ಈಗ ಅಡಿಕೆ ಮರಗಳು ಬಿದ್ದು ಸುಮಾರು 10-12 ಮರಗಳು ಇರುತ್ತದೆ. ರಾಜೇಶ್‌ನೂ ಒಂದು ಅಡಿಕೆ ತೋಟ ಮಾಡಿರುತ್ತಾನೆ. ಅದರಲ್ಲಿ ಸುಮಾರು 400 ಅಡಿಕೆ ಮರಗಳು ಇದೆ. ದಾವಾ ಆಸ್ತಿ ರಾಧಾಕೃಷ್ಣ, ಸೀತಮ್ಮ, ನಾನು ಮತ್ತು ರಾಜೇಶ್‌ನ ಸ್ವಾಧೀನದಲ್ಲಿದೆ. ನಮ್ಮ ನಮ್ಮ ಸ್ವಾಧೀನದಲ್ಲಿರುವ ತೋಟಗಳಿಗೆ ನಾವು ಬೇಲಿ ಹಾಕಿದ್ದೇವೆ. ನ್ಯಾಯಾಲಯದ ಆಯುಕ್ತರು ಸ್ಥಳಕ್ಕೆ ಭೇಟಿ ಕೊಟ್ಟು ಮಾಡಿದ ನಕ್ಷೆಯಲ್ಲಿ ದಾವಾ ಆಸ್ತಿಯಲ್ಲಿ ನಮ್ಮ ನಮ್ಮ ಸ್ವಾಧೀನತೆಯಲ್ಲಿರುವ ಆಸ್ತಿಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ತೋರಿಸಿದ್ದಾರೆಂದರೆ ಸಾಕ್ಷಿಯು ತೋರಿಸಿದ್ದು ಹೌದು, ಆದರೆ ಕಮಿಷನರ್ ಯಾವಾಗ ಬಂದರು ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ತೋಟಗಳಿಗೆ ನದಿಯ ನೀರು ಪೂರೈಕೆ ಇರುತ್ತದೆ ಮತ್ತು ಅದಕ್ಕೆ ಮೂರು ಜನ ಸಹೋದರರೂ ಪ್ರತ್ಯೇಕ ಪಂಪು ಸೆಟ್ಟುಗಳನ್ನು ಹಾಕಿಸಿರುತ್ತೇವೆ. ಹೆಣ್ಣು ಮಕ್ಕಳಲ್ಲಿ ಬೇಬಿ ಎನ್ನುವವರು ಈ ವ್ಯಾಜ್ಯ ಆದ ಮೇಲೆ ಅವರ ಆಸ್ತಿಯ ಹಕ್ಕನ್ನು ನನಗೆ ಬಿಟ್ಟುಕೊಟ್ಟಿದ್ದಾರೆ. ಅದನ್ನು ನ್ಯಾಯಾಲಯದಿಂದ ಪರವಾನಿಗೆ ಪಡೆದು ಮಾಡಿಕೊಂಡಿದ್ದು ಅಲ್ಲ. ಹೆಣ್ಣು ಮಕ್ಕಳಿಗೆ ಪಾಲು ಎಂದು ಕಮಿಷನರ್ ತೋರಿಸಿದ್ದು ಗುಡ್ಡೆಯ ಜಾಗಗಳು ಎಂದರೆ ಸರಿ. ಗುಡ್ಡೆಯ ಜಾಗಗಳನ್ನು ಹೆಣ್ಣು ಮಕ್ಕಳಿಗೆ ಪಾಲಿನಲ್ಲಿ ತೋರಿಸಿದ್ದು, ಈ ಬಗ್ಗೆ ನಮಗೆ ಯಾರಿಗೂ ಆಕ್ಷೇಪ ಇಲ್ಲ. ಬೇಬಿಯವರು ನನಗೆ ಹಕ್ಕು ಬಿಟ್ಟು ಕೊಟ್ಟಿದ್ದು, ಅವರ ಪಾಲಿಗೆ ಕೊಡುವ ಆಸ್ತಿಯನ್ನು ನನ್ನ ಪಾಲಿನ ಆಸ್ತಿಯ ಪಕ್ಕದಲ್ಲಿ ಕೊಡಬೇಕೆಂದು ನನ್ನ ಪ್ರಾರ್ಥನೆ. ನನ್ನ ಆಸ್ತಿಗೆ ತಾಗಿ ಗುಡ್ಡೆ ಜಾಗ ಇರುವುದಿಲ್ಲ, ನನ್ನ ಆಸ್ತಿಯ ಪಕ್ಕದಲ್ಲಿ ರಾಜೇಶ್‌ನ ಆಸ್ತಿ ಇರುತ್ತದೆ. ರಾಜೇಶ್‌ನ ಆಸ್ತಿಯ ಪಕ್ಕದಲ್ಲಿ ಗದ್ದೆ ಇರುತ್ತದೆ, ಗುಡ್ಡೆ ಜಾಗ ಇರುವುದಿಲ್ಲ. ನಮ್ಮ ತಾಯಿಯ ಪಾಲಿನ ಆಸ್ತಿಯ ಹತ್ತಿರ ಗುಡ್ಡೆ ಜಾಗ ಇಲ್ಲ. ರಾಜೇಶ್‌ನ ಆಸ್ತಿಯ

ಪಕ್ಕದ ಗದ್ದೆ ಸಾಗುವಳಿ ಯಾರೂ ಮಾಡುತ್ತಿಲ್ಲ, ಅದನ್ನು ಖಾಲಿ ಇಟ್ಟಿದ್ದಾರೆ. ಸದರಿ ಗದ್ದೆ ಜಾಗವನ್ನು ಬೇಬಿಯ ಹೆಸರಿಗೆ ಇಟ್ಟು ಪಾಲು ಮಾಡಲು ನನ್ನ ಒಪ್ಪಿಗೆ ಇಲ್ಲ. ನಮ್ಮ ಮನೆಯ ಹತ್ತಿರದ ತೆಂಗಿನ ತೋಟ ನಮ್ಮ ತಾಯಿಯ ಪಾಲಿಗೆ ಇಡಲು ನನ್ನ ಆಕ್ಷೇಪ ಇಲ್ಲ.

ದಾವಾ ಆಸ್ತಿಯ ಸ್ವಲ್ಪ ದೂರದಲ್ಲಿ ಹಿರಿಯರ ಕಾಲದಿಂದ ಆರಾಧಿಸಿಕೊಂಡು ಬಂದ ನಾಗಬನ ಇದೆ. ಅದು ಸುಮಾರು 2-3 ಸೆಂಟ್ಸ್ ಇದೆ. ಅದನ್ನು ಎಲ್ಲರ ಸಮಷ್ಟಿ ಹಕ್ಕಿಗೆ ಇಡಲು ನನ್ನ ಆಕ್ಷೇಪ ಇಲ್ಲ. ಈಗ ಮಾಡಿದ ಕಮಿಷನ್ ರಿಪೋರ್ಟ್‌ನಲ್ಲಿ ಮೇಲೆ ಹೇಳಿದಂತೆ ಪ್ರತಿಯೊಂದು ಆಸ್ತಿಗೂ ರಸ್ತೆಗಳನ್ನು ಕಾಯ್ದಿರಿಸಿ ನಾಗಬನವನ್ನು ಸಮಷ್ಟಿ ಹಕ್ಕಿಗೆ ಇಟ್ಟಲ್ಲಿ ಸದರಿ ರಿಪೋರ್ಟ್ ನಿಮಗೆ ಒಪ್ಪಿಗೆ ಇದೆಯಾ ಎಂದರೆ ಸಾಕ್ಷಿಯು ಸದರಿ ರಿಪೋರ್ಟ್ ತಪ್ಪಾಗಿದೆ ಎಂದು ಹೇಳುತ್ತಾರೆ. ನನಗೆ ಪಾಲು ಮಾಡಿದ್ದಲ್ಲಿ 0.94 ಸೆಂಟ್ಸ್ ಬರುತ್ತದೆ. ಸದರಿ ವರದಿಯ ನಕ್ಷೆಯಲ್ಲಿ ಸ.ನಂಃ 102/1ಎ ಮತ್ತು ಪಿ6 ಎಂದು ತೋರಿಸಿದ ಸ್ಥಳ ನನ್ನ ಪಾಲಿಗೆ ಬರಬೇಕು. ಪಿ6 ಜಾಗವನ್ನು ನನಗೆ ಕೊಟ್ಟು ನನ್ನ ಅಕ್ಕ ಬೇಬಿ ಅವರ ಪಾಲಿನಲ್ಲಿ ಬರುವ ವಿಸ್ತೀರ್ಣದಲ್ಲಿ ಅಷ್ಟೇ ವಿಸ್ತೀರ್ಣವನ್ನು ವಜಾಗೊಳಿಸಿದ್ದಲ್ಲಿ ವರದಿಗೆ ಒಪ್ಪುತ್ತೇನೆ. ಆದರ ಜೊತೆಗೆ ಪ್ರತಿಯೊಂದು ಆಸ್ತಿಗೂ ರಸ್ತೆಗಳನ್ನು ಕಾಯ್ದಿರಿಸಿ ನಾಗಬನವನ್ನು ಸಮಷ್ಟಿ ಹಕ್ಕಿಗೆ ಇಟ್ಟಲ್ಲಿ ಸದರಿ ರಿಪೋರ್ಟ್ ನನಗೆ ಒಪ್ಪಿಗೆ ಇದೆ. ಮನೆಯಲ್ಲಿ ಮೂರು ಜನರು ಪ್ರತ್ಯೇಕ ಪ್ರತ್ಯೇಕ ವಾಸಿಸುತ್ತಿದ್ದು, ಅದೇ ರೀತಿ 3 ಜನರಿಗೆ ಪಾಲು ಮಾಡಿಕೊಡಲು ನನ್ನ ಅಭ್ಯಂತರ ಇಲ್ಲ. ರಾಜೇಶ್ ಇಲೆಕ್ಟ್ರಿಷನ್ ಆಗಿದ್ದು, ಆತನಿಗೆ ಸ್ವಂತ ಆದಾಯ ಇದೆ. ನನಗೂ ಸಣ್ಣ ವಯಸ್ಸಿದ್ದು, ಕೃಷಿ ಕೆಲಸ ಮಾಡಿ ಆರೋಗ್ಯವಂತನಿದ್ದೇನೆಂದರೆ ಸರಿ. ನನ್ನ ತಾಯಿಗೆ ಈಗ 74 ವರ್ಷ ವಯಸ್ಸು. ಅವರಿಗೆ ನಮ್ಮಂತೆ ಸ್ವಂತವಾಗಿ ದುಡಿಯಲು ಸಾಧ್ಯ ಇಲ್ಲ ಮತ್ತು ಬೇರೆಯವರ ಮೇಲೆ ಅವಲಂಬಿತರಾಗಿರಬೇಕು ಎಂದರೆ ಸರಿ. ಸಾಕ್ಷಿಯು ಸ್ವತಃ ನನ್ನ ತಾಯಿ ನನಗೆ ಯಾರೂ ಬೇಡ, ನಾನೊಬ್ಬಳೇ ಇರುತ್ತೇನೆಂದು ಹೇಳುತ್ತಾರೆ. ಅವರಿಗೆ ಸ್ವತಂತ್ರವಾಗಿ ಇನ್ನು ಮನೆಯನ್ನು ಕಟ್ಟಲು ಸಾಧ್ಯ ಇಲ್ಲ ಮತ್ತು ನನಗೂ, ರಾಜೇಶ್‌ಗೂ ಆ ಸಾಮರ್ಥ್ಯ ಇದೆ ಎಂದು ಸೂಚಿಸಿದರೆ ಸರಿ. ನನ್ನ ಮತ್ತು ರಾಜೇಶ್‌ನ ಸಂಸಾರದ ನಡುವೆ ವಾದಿ ನನ್ನ ತಾಯಿ ತೊಂದರೆಗೆ ಒಳಗಾಗಿದ್ದಾರೆ ಎಂದರೆ ಸರಿಯಲ್ಲ. ನಾವು ಯಾವುದೇ ರೀತಿಯ ಪಾಲಿಗೂ ಒಪ್ಪದ ಕಾರಣ ಅವರು ಈ ವಯಸ್ಸಿನಲ್ಲಿ ನ್ಯಾಯಾಲಯಕ್ಕೆ ದಾವೆ ಹೂಡಿದ್ದಾರೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲ್ಪಾತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ, ಕಾರ್ಕಳ.